ಇ) ಈಗಾಗಲೇ ರಾಣಿಬೆನ್ನೂರು ತಾಲ್ಲೂಕಿನಲ್ಲಿ ೫ ಏತಾ ನೀರಾವರಿ ಯೋಜನೆಗಳು ಕೆಲಸ ಮಾಡುತ್ತಿವೆ. ಮತ್ತು ೫ ಏತಾ ನೀರಾವರಿ ಯೋಜನೆಗಳು ಪ್ರಗತಿ ಪಥದಲ್ಲಿವೆ. ಇನ್ನೂ ಮೂರು ಯೋಜನೆಗಳು ಪರಿಶೀಲನೆಯಲ್ಲಿ ಇವೆ. ಆದರೆ ಇವು ಯಾವ ಕಾರ್ಯ ಕ್ರಮದ ಪಟ್ಟಿಯಲ್ಲಿಯೂ ಸೇರಿಲ್ಲ. ನೀರಿನ ಸಾಧ್ಯತೆಯನ್ನು ಗಮನಿಸಿ ಮುಂದಿನ ಕ್ರಮವನ್ನು ತೆಗೆದುಕೊಳ್ಳಲಾಗುವುದು.

ರಾಣಿಬೆನ್ನೂರ ತಾಲ್ಲೂಕಿನಲ್ಲಿ ಏತಾ ನೀರಾವರಿ ಯೋಜನೆ

೨೦೧ (೧೨೫) ಶ್ರೀ ಬಿ.ಜಿ. ಪಾಟೀಲ್. (ರಾಣಿ ಬೆನ್ನೂರು).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಸಣ್ಣ ನೀರಾವರಿ ಮಂತ್ರಿಗಳು ದಯೆಯಿಟ್ಟು ಉತ್ತರಿಸುವರೆ :—

ಅ) ರಾಣೇಬೆನ್ನೂರು ತಾಲ್ಲೂಕಿನಲ್ಲಿ ಏತಾ ನೀರಾವರಿಯಿಂದ ಆಗುತ್ತಿರುವ ಯೋಜನೆಯ ಗರಿಷ್ಟ ಎಷ್ಟು, (Maximum extent of land to be irrigated) ಸದ್ಯಕ್ಕೆ ಎಷ್ಟು, ಕ್ಷೇತ್ರಕ್ಕೆ ನೀರಾವರಿ ಸೌಲಭ್ಯವಿರುತ್ತದೆ, ಹಾಗೂ ಗರಿಷ್ಟ ಮಿತಿಯನ್ನು ಅವಧಿಯಲ್ಲಿ ತಲುಪುವುದಿಲ್ಲ ಇದ್ದುದಕ್ಕೆ ಕಾರಣಗಳೇನು?

ಇ) ಯಾತ ನೀರಾವರಿ ಯೋಜನೆಗಳಿಂದ ಅವಶ್ಯಕವಾಗಿ ಹೆಚ್ಚಿನ ಪ್ರಮಾಣದಲ್ಲಿ ನೀರು ಸೋರಿ ಹೋಗುತ್ತಿದ್ದು ಈ ಬಗ್ಗೆ ಇದುವರೆಗೂ ಯಾವುದೇ ಕ್ರಮ ತೆಗೆದುಕೊಳ್ಳದಿರಲು ಕಾರಣಗಳೇನು?

ಶ್ರೀ ಆರ್.ಎನ್. ಲಕ್ಷ್ಮೀಪತಿ (ಸಣ್ಣ ನೀರಾವರಿ ರಾಜ್ಯ ಸಚಿವರು).—

ಅ) ೨೨೬೧ ಹೆಕ್ಟೇರ್. ಸದ್ಯಕ್ಕೆ ೬೮೦–೯೬ ಹೆಕ್ಟೇರು. ಗರಿಷ್ಟ ಮಿತಿಯನ್ನು ಮುಟ್ಟದೇ ಇರುವುದಕ್ಕೆ ಕಾರಣಗಳೇನೆಂದರೆ ರೈತರು ತಮ್ಮ ಜಮೀನುಗಳನ್ನು ಮುಟ್ಟ ಮಾಡಿ ಕೊಂಡಿಲ್ಲ. ಬೇಸಿಗೆಯಲ್ಲಿ ನೀರಿನ ಆಭಾವದ ಮೂಲಕ ನಿಟ್ಟೂರು ಏತಾ ನೀರಾವರಿ ಯೋಜನೆಯು ನೀರಾವರಿ ಸೌಲಭ್ಯ ದೊರಕಿಲ್ಲ.

ಆ) ನೀರು ಸೋರುವಿಕೆಯನ್ನು ತಪ್ಪಿಸಲು ಹಂತ ಹಂತವಾಗಿ ಕಾಲುವೆಗಳಿಗೆ ಫರಸಿಕಲ್ಲಿನಿಂದ ಲೈನಿಂಗ್ ಮಾಡಲಾಗುತ್ತಿದೆ.

ರಾಜ್ಯದ ೨೩ ಸಕ್ಕರೆ ಕಾರ್ಖಾನೆಗಳು ಕಬ್ಬು ಬೆಳೆಗಾರರಿಗೆ ಕೊಡಬೇಕಾದ ಬಾಕಿ

೨೦೨ (೧೦೫) ಶ್ರೀ ಎಂ. ಜಿ. ಜರತಾರಗರ್ (ಹುಬ್ಬಳ್ಳಿ).—ಕೈಗಾರಿಕಾ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ :—

(ಅ) ರಾಜ್ಯದ ೨೩ ಸಕ್ಕರೆ ಕಾರ್ಖಾನೆಗಳು ಕಬ್ಬು ಬೆಳೆಗಾರರಿಗೆ ಅಂದಾಜು ೨೦ ರಿಂದ ೨೫ ಕೋಟಿ ರೂಪಾಯಿ ಕೊಡಬೇಕಾಗಿರುವುದು ಸರಕಾರದವರ ಗಮನಕ್ಕೆ ಬಂದಿದೆಯೇ ;

(ಆ) ಕೊಪ್ಪಳ ತಾಲ್ಲೂಕಿನ ಮುನಿರಾಬಾದ್ ಸಾಲಾರ ಜಂಗ ಕಾರ್ಖಾನೆಗೆ ಅಕ್ಕಪಕ್ಕದ ಹಾಗೂ ಕೊಪ್ಪಳದ ತಾಲ್ಲೂಕಿನ ರೈತರು ಪ್ರತಿವರ್ಷ ಕಬ್ಬು ಪೂರೈಸುತ್ತಿರುವ ಪ್ರಮಾಣವೆಷ್ಟು ; ೮೦ ರಿಂದ ೮೨ನೇ ಇಸವಿಯವರೆಗೆ ಪೂರೈಕೆಯ ವಿವರಗಳೇನು ;

(ಇ) ಮೇಲ್ಕಂಡ ಕಾರ್ಖಾನೆಗೆ ರೈತರಿಂದ ಪೂರೈಕೆಯಾದ ಕಬ್ಬಿನ ಹಣ ೧೯೮೦–೧೯೮೩ ಬಾಕಿ ಉಳಿದಿದ್ದು ಹಣ ಎಷ್ಟು ;

(ಈ) ಮೇಲ್ಕಂಡ ಸಕ್ಕರೆ ಕಾರ್ಖಾನೆಯವರು ಸ್ವತಃ ಜಾಮೀನು ನೀಡಿ ರೈತರ ಭೂಮಿಗಳನ್ನು ಸದರಿ ರೈತರಿಂದಲೇ ಬ್ಯಾಂಕಿಗೆ ಎತ್ತಿ ಹಾಕಿಸಿ ಅವರ ಹೆಸರುಗಳಲ್ಲಿ ಸಾಲ ಪಡಕೊಂಡಿದ್ದು ನಿಜವೇ ಹಾಗಿದ್ದರೆ ಎಷ್ಟು ಮಂದಿ ರೈತರಿಂದ ಈ ರೀತಿ ಜಾಮೀನುಗಳನ್ನು ಎತ್ತಿ ಹಾಕಿಸಿ ಕಾರ್ಖಾನೆಯವರು ಪಡಕೊಂಡ ಹಣದ ಮೊತ್ತವೆಷ್ಟು ;

(ಉ) ರೈತರಿಂದ ಟನ್ ಒಂದಕ್ಕೆ ಒಂದು ರೂ ರಾಷ್ಟ್ರೀಯ ಉಳಿತಾಯಕ್ಕೆಂದು ಪ್ರತಿಯೊಬ್ಬ ರಿಂದ ವಸೂಲು ಮಾಡಿ ಆ ಹಣವನ್ನು ಆಯಾ ತಿಂಗಳಲ್ಲಿ ತುಂಬದೆ ಇದ್ದ ಪ್ರಕರಣಗಳೆಷ್ಟು ; ಹೀಗೆ ತುಂಬದೆ ಇರುವುದಕ್ಕೆ ಕಾರಣವೇನು ?